ಕಾಲದಿಂದಲಂತೂ ತನ್ನನ್ನು ಪೂರ್ಣತಃ ಹೊರಹಾಕಿಕೊಳ್ಳುತ್ತ ಪಂಚಭೂತಗಳ ಪ್ರತ್ಯಕ್ಷ ಪರೋಕ್ಷ ಪೂಜೆಯಲ್ಲಿ ತೊಡಗಿದ್ದ. ಈಗ ಎದುರು ಕಂಡವರೆಲ್ಲ ಮಕ್ಕಳು ಎನ್ನುವ ಉದಾರ ಮನೋಭಾವ ಅವನನ್ನು ಆವರಿಸತೊಡಗಿತ್ತು. ಬಾಲ್ಯದಿಂದಲೂ ನೋವು, ಹತಾಶೆ, ಅಸೂಯಾಪರರ ದಾಳಿಗಳನ್ನು ಎದುರಿಸಿದ ನಾಡಿಗನನ್ನು ಬಡತನ ಬಾಧಿಸಿತ್ತು; ಆದರೆ ಕಳಸ, ಸೊರಬ, ಆನವಟ್ಟಿ, ಸಾಗರ, ಶಿರಾಳಕೊಪ್ಪ; ಶಿವಮೊಗ್ಗ, ಬೆಂಗಳೂರು, ಮೈಸೂರು; ಬೆಳಗಾಂವಿ, ಮುಂಬಯಿ, ಮಡಗಾಂವ, ಮಾಪ್ಸಾ; ಫಿಲಿಡೆಲ್ಫಿಯಾ ಮುಂತಾದ ಕಡೆಯ ಅನಿವಾರ್ಯ ವಾಸ್ತವ್ಯಗಳು, ವ್ಯಾಸಂಗಗಳು, ಕಲಿಕೆ ಕಲಿಸುವಿಕೆ ಕೆಲಸ ನೌಕರಿಗಳು ಅವನ ಅನುಭವ ಲೋಕವನ್ನು ವಿಸ್ತರಿಸಿದ್ದುವು, ಗಾಢವಾಗಿಸಿದ್ದುವು; ಕೊನೆಗೆ ಶ್ರೀವತ್ಸಸ್ಥಿತಿಗೆ ತಂದು ನಿಲಿಸಿದ್ದುವು. ಕೆಲವು ಸಾಂಸಾರಿಕ ಹೊಣೆಗಳು ಬೆನ್ನಿಗಿರದಿದ್ದರೆ ನಾಡಿಗ ಸಂನ್ಯಾಸಿಯಾಗಿ ಯಾವುದಾದರೂ ಮಠಕ್ಕೆ ಹೋಗಿಬಿಡಬಹುದಾಗಿತ್ತು.

ವೈಯಕ್ತಿಕವಾಗಿ ನಾಡಿಗನನ್ನು ಹತ್ತಿರದಿಂದ ಕಂಡಿದ್ದೆ, ಓದಿಕೊಂಡಿದ್ದೆ. ಸುಮತೀಂದ್ರ ಹೊಸ ಕಾವ್ಯ 'ಶ್ರೀವತ್ಸಸ್ತುತಿ' ರಚಿಸಿ ಮಾಗಿದ ವ್ಯಕ್ತಿತ್ವದ ಪೂರ್ಣಕುಂಭದಂತೆ ಮೆರುಗತೊಡಗಿದ್ದ. ಈಗಂತೂ ಅವನಲ್ಲಿ ಎಲ್ಲದಕ್ಕೂ ಕೇವಲ ಮುಗುಳುನಗೆ, ಮುಕ್ತ ಹೃದಯ, ಶ್ರೀವತ್ಸ ಗೋತ್ರದ ಮೂಲ ಪುರುಷನ ಅವತಾರದಂತೆ ಕಾಣತೊಡಗಿದ್ದ. 'ಶ್ರೀವತ್ಸಸ್ತುತಿ' ಮನುಷ್ಯಮಾತ್ರನ ಸದ್ಗುಣಗಳ ಸ್ತುತಿಯಾಗಿತ್ತು. ಅವನ ಮನೆಯಲ್ಲಿ ಹಸ್ತಪ್ರತಿ ಮತ್ತೆ ಓದಿ (2017 ಫೆಬ್ರುವರಿ 17), ಅಲ್ಲಲ್ಲಿ ನನಗನಿಸಿದ ಕೆಲವು ಟಿಪ್ಪಣಿ ಬರೆದೆ. ನಾಡಿಗ ನೋಡಿದ, ಅವನ್ನು ತಿದ್ದಿಕೊಳ್ಳುವೆ ಅಂದ. ನನ್ನ ತಿದ್ದುಪಡಿಗಳನ್ನು ನಾಡಿಗ ಮೊದಲ ಸಲ ಒಪ್ಪಿದ್ದ, ಖುಷಿಯಾಗಿತ್ತು. ಅಂದು ಅವನೊಡನೆ ಮೂರ್ನಾಲ್ಕು ತಾಸು ಕಳೆದೆ. ನಾನು ಅವನ ಮನೆಯಲ್ಲಿದ್ದಾಗಲೇ ಎರಡನೇ ಮಗಳು ರಶ್ಮಿ ಬಂದಳು. ನನ್ನನ್ನು ನೋಡಿ ಅವಳಿಗೂ ಸಂತಸವಾಯಿತು. ನಾನು 'ಸಂಭ್ರಮ'ದಲ್ಲಿ ನಾಡಿಗನನ್ನು ಸಂದರ್ಶಿಸಿದ್ದು, ತಾನು ಆಸ್ಟ್ರೇಲಿಯಾದಲ್ಲಿದ್ದು ಲೈವ್ ನೋಡಿದ್ದಾಗಿ ಹೇಳಿದಳು. ತುಂಬ ಚೆನ್ನಾಗಿ ಬಂತು, ಪ್ರಪಂಚದ ತುಂಬ ಅಸಂಖ್ಯ ಜನ ನೋಡಿದ್ದಾರೆ ಅಂದಳು.

* * *

2018 ಆಗಸ್ಟ್ 1ರಂದು ಮಾಲತಿಯ ಫೋನ್. 'ನಿನ್ನೆ ರಾತ್ರಿ 9ಕ್ಕೆ ಉಸಿರಾಟದ ತೊಂದರೆ ಆಯಿತು. ಫೋರ್ಟಿಸ್ ಆಸ್ಪತ್ರೆಯಲ್ಲಿ ತುರ್ತು ನಿಗಾ ಘಟಕದಲ್ಲಿ ಇರಿಸಿದ್ದಾರೆ' ಅಂದಳು. ಆಘಾತವಾಯಿತು. ಒಂದು ತಿಂಗಳ ಹಿಂದೆ ನಾನು 'ಮಾಸ್ತಿ ಪ್ರಶಸ್ತಿ' ಪಡೆಯಲು ಹೋದಾಗ ನಾಡಿಗನ ಕಡೆಗೆ ಹೋಗಬೇಕಿತ್ತು, ಕಣ್ಣು ತೋರಿಸಲು ಚೆನ್ನೈಗೆ ಹೋಗುವ ಗಡಿಬಿಡಿಯಲ್ಲಿದ್ದೆ; ನಾಡಿಗನಲ್ಲಿ ಹೋಗಲಾಗದ್ದಕ್ಕೆ ನೊಂದುಕೊಂಡೆ.

ಆಗಸ್ಟ್ 7ರಂದು ಬೆಳಗ್ಗೆ 6.30ಕ್ಕೆ ನನ್ನ ನಾಡಿಗ, ನನ್ನ ಅಣ್ಣ ಸುಮತೀಂದ್ರ ಶ್ರೀವತ್ಸ ಸನ್ನಿಧಿಗೆ ಸೇರಿದ್ದ. ಅವನ ಮೊಮ್ಮಗಳು ವಿಭಾ ಫೋನಿಸಿ ವಿಷಯ ತಿಳಿಸಿದಳು. ಆ ದಿನ ಬೆಂಗಳೂರಿನಲ್ಲಿಯೇ ಇದ್ದ ಹೇಮಾ 'ಮಯ ಇಂದ್ರಪ್ರಸ್ಥಕ್ಕೆ ಹೋಗಿ ವಿದಾಯ-ವಂದನೆ ಸಲ್ಲಿಸಿ ಬಂದಳು. ಎರಡು ವಾರ ಬಿಟ್ಟು ಮನೆಗೆ ಹೋದೆ. ಮಾಲತಿ ಮಗಳ ಮನೆಗೆ ಹೋಗಿದ್ದಳು. ಫೋನ್‌ನಲ್ಲಿ ಮಾತಾಡಿದೆ.

ನನ್ನ ಆರ್ತತೆಯ ಕರೆ ನಾಡಿಗನಿಗೆ ತಲುಪಿತ್ತು.

* * *

ನಾಡಿಗನೇ ಬರೆದ ಮಾತು ಅವನ ಹೃದಯ ನೈರ್ಮಲ್ಯವನ್ನು ತೆರೆದಿಡುತ್ತವೆ: "ನನ್ನ ಸುತ್ತ ಇರುವ ಜನರನ್ನು ನಾನು ಪ್ರೀತಿಸುತ್ತೇನೆ. ಆದ್ದರಿಂದ ಅವರ ಜೊತೆ ವಾಗ್ವಾದಕ್ಕೆ ಇಳಿಯುತ್ತೇನೆ. ಜಗಳವಾಡುತ್ತೇನೆ. ಪ್ರೀತಿಯ ಮಾತುಗಳನ್ನು ಹೇಳುತ್ತೇನೆ, ಎಚ್ಚರಿಸುತ್ತೇನೆ. ಇವರಿಗೆ ಒಳ್ಳೆಯದಾಗಲಿ ಎಂದು ಹಾರೈಸುತ್ತೇನೆ... 'ಅಮೃತವಾಹಿನಿಯೊಂದು ಹರಿಯುತಿದೆ ಮಾನವನ ಎದೆಯಿಂದಲೆದೆಗೆ ಸತತ' ಎನ್ನುವುದನ್ನು ನನ್ನ ಕಾವ್ಯ ಸಹೃದಯರಿಗೆ ಮನದಟ್ಟು ಮಾಡಿಸುವುದಕ್ಕಿಂತ ಹೆಚ್ಚಿಗೆ ಏನನ್ನೂ ನಾನು ಬಯಸಿಲ್ಲ. ಅದು ಅಷ್ಟು ಕೆಲಸ ಮಾಡಿದರೆ ಕೀರ್ತಿ, ಧನಾರ್ಜನೆ, ವ್ಯವಹಾರಜ್ಞಾನ, ಅಮಂಗಳ ನಿವಾರಣೆ, ತತ್ಕಾಲದಲ್ಲೇ ಪರಮಾನಂದ, ಕಾಂತಾಸಮ್ಮಿತ ಮೊದಲಾದುವು ತಾವಾಗಿಯೇ ಬರುತ್ತವೆ." (ಸಮಗ್ರ ಕಾವ್ಯ: 1998).

ನಾಡಿಗನ ಈ ಹಾರೈಕೆಯಲ್ಲಿ ಒಬ್ಬ ಕಾವ್ಯಯತಿಯಿದ್ದಾನೆ, ಸಂತನಿದ್ದಾನೆ, ಶ್ರೀವತ್ಸ ಸುಮತೀಂದ್ರನಿದ್ದಾನೆ.'

ಚಿತ್ರಗಳು: ಕೃಷ್ಣಕುಮಾರ್ ಪಿ.ಎಸ್